**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು  ವಿರಾಜಪೇಟೆ**

**ಓ.ಎಸ್. ಸಂಖ್ಯೆ ಃ 60/2023**

**ಪಿಡಬ್ಲ್ಯೂ- 1**

**ದಿನಾಂಕ ಃ 13-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ. ಬಿ ಎ ಎಸ್ ವಕೀಲರಿಂದ ಃ**

ನಾನು ನನ್ನ ಸಾಕ್ಷ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದನ್ನು ನಾನೇ ಹೇಳಿ ಬೆರಳಚ್ಚು ಮಾಡಿಸಿ ಓದಿ, ತಿಳಿದುಕೊಂಡು ಸಹಿಯನ್ನು ಹಾಕಿರುತ್ತೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಡಿ ಗುರುತಿಸಿದ್ದರಿಂದ ಆ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| ನಿಶಾನೆಗಳು | ದಾಖಲಾತಿಗಳು |
|---|---|
| ನಿ.ಪಿ.1 | ದಿನಾಂಕ 22-10-1998 ರ ದಾನ ಪತ್ರದ ದೃಢೀಕೃತ ನಕಲು |
| ನಿ.ಪಿ.2 | ದಿನಾಂಕ 30-03-1984 ರ ಕ್ರಯ ಪತ್ರದ ದೃಢೀಕೃತ ನಕಲು |
| ನಿ.ಪಿ.3 | ಜಮಾ ಬಂಧಿಯ ದೃಢೀಕೃತ ನಕಲು |
| ನಿ.ಪಿ.4 | ಋಣಭಾರ ರಹಿತ್ಯ ಪ್ರಮಾಣ ಪತ್ರದ ಎರಡು ದೃಢೀಕೃತ ನಕಲುಗಳು |
| ನಿ.ಪಿ.5 | ದಿನಾಂಕ 19-01-2023 ರಂದು ಕಣ್ಣಂಗಾಲ ಗ್ರಾಮ ಪಂಚಾಯಿತಿ ಕಾರ್ಯಲಯದವರು ಮಾಹಿತಿ ಹಕ್ಕಿನ ವಿವರಗಳದಂತೆ ನೀಡಿರುವ ಮಾಹಿತಿ ಹಾಗೂ ದಾಖಲೆಗಳ ದೃಢೀಕೃತ ನಕಲು(ಒಟ್ಟು 27 ಪುಟಗಳು) |
| ನಿ.ಪಿ.6 | ದಿನಾಂಕ 17-02-2014 ರಂದು ಗ್ರಾಮ ಪಂಚಾಯಿತಿ ಕಾರ್ಯಾಲಯ ಕಣ್ಣಂಗಾಲದವರು ನೀಡಿರುವ ವಾಸ ದೃಡೀಕರಣ ಪತ್ರದ ದೃಢೀಕೃತ ನಕಲು |
| ನಿ.ಪಿ.7 | ದಿನಾಂಕ 17-02-2014 ರಂದು ಗ್ರಾಮ ಪಂಚಾಯಿತಿ ಕಾರ್ಯಾಲಯ ಕಣ್ಣಂಗಾಲದವರು ನೀಡಿರುವ ಕಟ್ಟಡ ಕಟ್ಟಲು ನೀಡಿರುವ ಪರವಾನಗಿಯ ದೃಢೀಕೃತ ನಕಲು |
| ನಿ.ಪಿ.8 | ವಾದಿ ಕಣ್ಣಂಗಾಲ ಗ್ರಾಮ ಪಂಚಾಯಿತಿಯವರಿಗೆ ನೀಡಿರುವ ಅರ್ಜಿಯ ಸ್ವೀಕೃತಿ ಪತ್ರದ ದೃಢೀಕೃತ ನಕಲು |
| ನಿ.ಪಿ.9 | ಪ್ರತಿವಾದಿಯು ಐ ಜಿ ಪಿ, ದಕ್ಷಿಣ ವಲಯ, ಮೈಸೂರು ರವರಿಗೆ |

| | |
|---|---|
| | ನೀಡಿರುವ ದೂರಿನ ದೃಢೀಕೃತ ನಕಲು |
| ನಿ.ಪಿ.10 | ದಿನಾಂಕ 31-05-2023 ರಂದು ವಾದಿ ತಹಶೀಲ್ದಾರ್ ರವರಿಗೆ ನೀಡಿರುವ ದೂರಿನ ಪ್ರತಿಯ ದೃಢೀಕೃತ ನಕಲು |
| ನಿ.ಪಿ.11 | ಸರ್ವೆ ನಂ. 17/8 ರ ಪಹಣಿ ಪತ್ರಿಕೆ ( ಎರಡು ಪುಟಗಳು) ದೃಢೀಕೃತ ನಕಲು |
| ನಿ.ಪಿ.12 | ಕಂದಾಯ ರಶೀದಿ ದೃಢೀಕೃತ ನಕಲು |
| ನಿ.ಪಿ.13 | ಸಿಸಿ 28/2025 ರಲ್ಲಿ ಸಲ್ಲಿಸಿರುವ ಅಂತಿಮ ವರದಿಯ ದೃಢೀಕೃತ ನಕಲು |

ಮುಖ್ಯ ವಿಚಾರಣೆ ಮುಕ್ತಾಯ.

ಆದುದರಿಂದ ಪ್ರಮಾಣ ಪತ್ರದಲ್ಲಿ ಕೋರಿರುವಂತೆ ದಾವೆಯನ್ನು ಡಿಕ್ರಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಪ್ರದೀಪ ಪೋತದಾರ)
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.